ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ

Spl. C. (P.C.) 09/2014

ಪ್ರಾಸಾಃ **26** ಚಾಸಾಃ **22**
ದಿನಾಂಕಃ **03-08-2026**

ಹೆಸರು	::	ಕೆ.ಹೆಚ್ ಓಂಕಾರಪ್ಪ
ತಂದೆಯ ಹೆಸರು	::	ಟೈಲರ್ ಹನುಮಣ್ಣ
ವಯಸ್ಸು	::	57 ವರ್ಷ
ಉದ್ಯೋಗ	::	ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್
ವಾಸ ಸ್ಥಳ	::	ಚಿತ್ರದುರ್ಗ

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಾದ ಶ್ರೀ ಟಿ.ಅಮರೇಂದ್ರ ರವರಿಂದಃ

1. ದಿನಾಂಕ 01.06.2012 ರಿಂದ ಜೂನ್ 2013 ರವರೆಗೆ ಕೋಲಾರ ಜಿಲ್ಲಾ ಪಂಚಾಯತ್ ನಲ್ಲಿ ಮುಖ್ಯ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 27.11.2012 ರಂದು ಲೋಕಾಯುಕ್ತ ಇನ್ಸ್ ಪೆಕ್ಟರ್ ರವರು ಈಗ ತೋರಿಸಿದ ಪತ್ರವನ್ನು ನೀಡಿ ಅದರಲ್ಲಿ ಕೇಳಿರುವ ಮಾಹಿತಿಯನ್ನು ಒದಗಿಸುವಂತೆ ತಿಳಿಸಿದರು. ಸದರಿ ಪತ್ರವನ್ನು ನಿ ಪಿ 558 ಎಂದು ಗುರ್ತಿಸಲಾಯಿತು. ಸದರಿ ಪತ್ರಕ್ಕೆ ಸ್ಪಂದಿಸುತ್ತಾ ಈಗ ತೋರಿಸಿದ ದಾಖಲೆಗಳನ್ನು ತನಿಖಾಧಿಕಾರಿಗೆ ಒದಗಿಸಿದೆ. ಸಾಕ್ಷಿದಾರರು ಗುರ್ತಿಸಿದ ದಾಖಲೆಗಳು ದೋಷಾರೋಪಣ ಪಟ್ಟಿಯ ವ್ಯಾಲ್ಯೂಮ್ 3(1) ನಲ್ಲಿ ದಾಖಲೆ 11 ಎಂದು ನಮೂದಿಸಿದ್ದು ಇವೆ. ಅವುಗಳಲ್ಲಿ ಕೆಲವು ದಾಖಲೆಗಳನ್ನು ಈಗಾಗಲೇ ನಿ ಪಿ 551, 515, 516, 517, 518, 519, 520, 521, 451, 522, 452, 523, 525, 526, 528, 529, 530, 531, 511, 512, 513, 514 ಎಂದು ಗುರ್ತಿಸಲಾಗಿದೆ. ಟೋಕನ್ ಸಂಖ್ಯೆ 136925 ಇದಕ್ಕೆ ಸಂಬಂಧಿಸಿದ ಟೋಕನ್ ಮತ್ತು ಬಿಲ್ಲನ್ನು ಒಟ್ಟಾಗಿ ನಿ ಪಿ 559 ಎಂದು ಗುರ್ತಿಸಲಾಯಿತು. 3 ಕಾಂಟ್ರಾಕ್ಟ್ ಸರ್ಟಿಫಿಕೇಟುಗಳನ್ನು ನಿ ಪಿ 560 ರಿಂದ 562 ಎಂದು ಗುರ್ತಿಸಲಾಯಿತು.

2. ಜಿಲ್ಲಾ ಪಂಚಾಯತ್, ಕೋಲಾರ ಇವರ ಪತ್ರ ದಿನಾಂಕ 11.04.2012 ಇದರ ಜೊತೆಗೆ ಒದಗಿಸಿದ ಒಂದು ಫ್ಲಾಪಿನ ಮಾಹಿತಿಯನ್ನು ಈಗಾಗಲೇ ನಿ ಪಿ 525 ಎಂದು

ಗುರ್ತಿಸಲಾಗಿದೆ. ಆದ್ದರಿಂದ ಸದರಿ ಪತ್ರವನ್ನು ಮತ್ತು ಅದರ ಜೊತೆಗೆ ಒದಗಿಸಿದ ಇನ್ನೊಂದು ಫ್ಲಾಪಿಯ ಮಾಹಿತಿಯನ್ನು ನಿ ಪಿ 525(ಎ) ಮತ್ತು 525(ಬಿ) ಎಂದು ಗುರ್ತಿಸಲಾಯಿತು. ಜಿಲ್ಲಾ ಪಂಚಾಯತ್, ಕೋಲಾರ 17.04.2012 ರ ಪತ್ರ ಮತ್ತು ಅದರ ಜೊತೆ ಒದಗಿಸಿದ ಫ್ಲಾಪಿಯ ಪ್ರಿಂಟ್ ನ್ನು ನಿ ಪಿ 563 ಮತ್ತು 564 ಎಂದು ಗುರ್ತಿಸಲಾಯಿತು. ಕೋಲಾರದ ಜಿಲ್ಲಾ ಪಂಚಾಯತ್ ನ ದಿನಾಂಕ 17.07.2012 ರ ಪತ್ರದೊಂದಿಗೆ ಒದಗಿಸಿದ ಒಂದು ಫ್ಲಾಪಿಯ ಪ್ರಿಂಟ್ ನ್ನು ಈಗಾಗಲೇ ನಿ ಪಿ 526 ಎಂದು ಗುರ್ತಿಸಲಾಗಿದೆ. ಆದ್ದರಿಂದ ಸದರಿ ಪತ್ರವನ್ನು ಮತ್ತು ಅದರ ಜೊತೆಗೆ ಒದಗಿಸಿದ ಇನ್ನೊಂದು ಫ್ಲಾಪಿಯ ಪ್ರಿಂಟ್ ನ್ನು ನಿ ಪಿ 526(ಎ) ಮತ್ತು 526(ಬಿ) ಎಂದು ಗುರ್ತಿಸಲಾಯಿತು.

3. ಜಿಲ್ಲಾ ಪಂಚಾಯತ್, ಕೋಲಾರ ಇವರ ಪತ್ರ ದಿನಾಂಕ 24.07.2012 ಮತ್ತು ಅದರ ಜೊತೆಗೆ ಒದಗಿಸಿದ 2 ಫ್ಲಾಪಿಯ ಪ್ರಿಂಟ್ ಗಳನ್ನು ನಿ ಪಿ 565 ರಿಂದ 567 ಎಂದು ಗುರ್ತಿಸಲಾಯಿತು.

4. ಜಿಲ್ಲಾ ಪಂಚಾಯತ್, ಕೋಲಾರದ ದಿನಾಂಕ 20.04.2012 ಮತ್ತು 25.07.2012 ದಿನಾಂಕಗಳ ಅಧಿಕೃತ ಜ್ಞಾಪನಗಳನ್ನು ನಿ ಪಿ 568 ಮತ್ತು 569 ಎಂದು ಗುರ್ತಿಸಲಾಯಿತು. ನಿ ಪಿ 569 ರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಾರೆ. ಜಿಲ್ಲಾ ಪಂಚಾಯತ್, ಕೋಲಾರ ಪತ್ರಗಳು ದಿನಾಂಕ 28.11.2012, 30.11.2012 (ಸ್ವೀಕೃತಿ ದಾಖಲೆ), ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಛೇರಿ ಪತ್ರ ದಿನಾಂಕ 10.08.2012, ಜಿಲ್ಲಾ ಪಂಚಾಯತ್ ಕೋಲಾರ ಕಾರಣ ಕೇಳಿ ನೋಟೀಸು ದಿನಾಂಕ 18.08.2012, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ ಕೋಲಾರ ರವರ ಪತ್ರ ದಿನಾಂಕ 24.08.2012 ಇವುಗಳನ್ನು ಕ್ರಮವಾಗಿ 570 ರಿಂದ 574 ಎಂದು ಗುರ್ತಿಸಲಾಯಿತು.

5. ಜಿಲ್ಲಾ ಪಂಚಾಯತ್, ಕೋಲಾರ ನ ಸಿಇಒ ರವರ ಲೆಟರ್ ಹೆಡ್ ನ ಪತ್ರ ದಿನಾಂಕ 17.08.2012, ಖಜಾನೆ ನಿರ್ದೇಶನಾಲಯ ಬೆಂಗಳೂರು ಪತ್ರ ದಿನಾಂಕ 15.09.2012;' ಶಿವಸ್ವಾಮಿ ನಿರ್ದೇಶಕರು ಇವರ ಲೆಟರ್ ಹೆಡ್ ನ ಪತ್ರ ದಿನಾಂಕ 25.09.2012, ದಿನಾಂಕ 04.10.2012 ರ 2 ಕಾರಣ ಕೇಳಿ ನೋಟೀಸು, ಜಿಲ್ಲಾ ಪಂಚಾಯತ್ ಕೋಲಾರ ನ ಸಿಇಒ ರವರು ಬರೆದ ದಿನಾಂಕ 12.10.2012 ರ 2 ಪತ್ರಗಳು,

ಜಿಲ್ಲಾ ಪಂಚಾಯತ್ ಕೋಲಾರ ದಿನಾಂಕ 28.09.2012 ರ ಟಿಪ್ಪಣಿ, ಜಿಲ್ಲಾ ಪಂಚಾಯತ್ ಕೋಲಾರ ದಿನಾಂಕ 12.03.2012 ರ ಸುತ್ತೋಲೆ, ಜಿಲ್ಲಾ ಪಂಚಾಯತ್ ಕೋಲಾರ ದಿನಾಂಕ 21.05.2012 ರ ಅಧಿಕೃತ ಜ್ಞಾಪನಾ ಇವುಗಳನ್ನು ನಿ ಪಿ 575 ರಿಂದ 585 ಎಂದು ಗುರ್ತಿಸಲಾಯಿತು. ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆಯುವಾಗ ಈಗ ತೋರಿಸಿದ ಮಹಜರನ್ನು ಮಾಡಿದ್ದಾರೆ. ಸದರಿ ಮಹಜರನ್ನು ನಿ ಪಿ 586 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 586(ಎ) ಎಂದು ಗುರ್ತಿಸಲಾಯಿತು.

6. ಜಿಲ್ಲಾ ಪಂಚಾಯಿತ್ತಿಯ ಮುಖ್ಯ ಲೆಕ್ಕಾಧಿಕಾರಿಯಾಗಿ ನನ್ನ ಕರ್ತವ್ಯವೇನೆಂದರೆ ಸರ್ಕಾರದಿಂದ ವಿವಿಧ ಇಲಾಖೆಗಳಿಗೆ ಬಿಡುಗಡೆಯಾಗುವ ಅನುದಾನವನ್ನು ಉಪ ಲೆಕ್ಕ ಶೀರ್ಷಿಕೆಗಳ ಅನುಗುಣವಾಗಿ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಅನುದಾನವನ್ನು ಬಿಡುಗಡೆ ಮಾಡುವುದು ಹಾಗೂ ಸದರಿ ಅನುದಾನದ ಖರ್ಚು ವೆಚ್ಚಗಳ ಬಗ್ಗೆ ಪೂರಕವಾದ ದಾಖಲಾತಿಗಳೊಂದಿಗೆ ಇಲಾಖಾ ಮುಖ್ಯಸ್ಥರು ಜಿಲ್ಲಾ ಪಂಚಾಯತ್ ಕಛೇರಿಗೆ ಒದಗಿಸಲು ಸೂಚಿಸುವುದು ಹಾಗೂ ಸದರಿ ಅನುದಾನದ ಖರ್ಚು ವೆಚ್ಚಗಳ ಬಗ್ಗೆ ಲೆಕ್ಕ ಸಂಕಲನ (reconcile) ಮಾಡುವುದು ಮತ್ತು ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅನುದಾನಗಳ ಖರ್ಚು ವೆಚ್ಚಗಳ ಬಗ್ಗೆ ಆಂತರಿಕ ಲೆಕ್ಕ ಪರಿಶೋಧನೆ ಕೈಗೊಳ್ಳುವುದು.

7. ನಾವು ಜಿಲ್ಲಾ ಮಟ್ಟದ ಇಲಾಖಾ ಮುಖ್ಯಸ್ಥರಿಗೆ ಅನುದಾನವನ್ನು ಬಿಡುಗಡೆ ಮಾಡುತ್ತೇವೆ. ಸದರಿ ಅನುದಾನವನ್ನು ಆ ಇಲಾಖೆಯ ಮುಖ್ಯಸ್ಥರು ಆ ಇಲಾಖೆಯ ತಾಲ್ಲೂಕುಗಳಿಗೆ ಹಂಚಿಕೆ ಮಾಡಿ ಅನುದಾನವನ್ನು ನಿಯಮಾನುಸಾರ ಖರ್ಚು ಮಾಡಲು ಕ್ರಮ ವಹಿಸಬೇಕು.

8. ಜಿಲ್ಲಾ ಪಂಚಾಯಿತ್ತಿಯಿಂದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ದಿನಾಂಕ 20.04.2012 ರಂದು ನಿ ಪಿ 568 ರಂತೆ ಅನುದಾನದ ಅಧಿಕೃತ ಜ್ಞಾಪನ ಪತ್ರ ಹೊರಡಿಸಲಾಗಿದೆ. ಸದರಿ ದಾಖಲೆಯ ಪ್ರಕಾರ ಅದರ ಹಿಂದುಗಡೆ ನಮೂದಿಸಿರುವ ಲೆಕ್ಕ ಶೀರ್ಷಿಕೆಗಳ ಅಡಿ ಒಟ್ಟು ರೂ.1,53,000/- ಹಣ ಬಿಡುಗಡೆಯಾಗಿದೆ. ನಿ ಪಿ 569 ರ ಪ್ರಕಾರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ದಿನಾಂಕ 25.07.2012 ರಂದು ಅದರ ಹಿಂಬದಿಯಲ್ಲಿ ನಮೂದಿಸಿದ ಲೆಕ್ಕ ಶೀರ್ಷಿಕೆಗಳ ಅಡಿ ಒಟ್ಟು 85,57,000/- ಹಣ ಬಿಡುಗಡೆಯಾಗಿದೆ.

ಅದರಲ್ಲಿ ವೇತನೇತರ ಹಣ 85,06,000/- ಹಣ ಬಿಡುಗಡೆಯಾಗಿದೆ. ಲೆಕ್ಕ ಶೀರ್ಷಿಕೆ 29 ಮತ್ತು 30 ರಲ್ಲಿ ವೇತನೇತರ ಹಣ ಕ್ರಮವಾಗಿ 49.960 ಲಕ್ಷ ಮತ್ತು 3.330 ಲಕ್ಷ ಬಿಡುಗಡೆಯಾಗಿದೆ. ನಿ ಪಿ 569 ರಲ್ಲಿನ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಾರೆ.

9. ದಿನಾಂಕ 10.08.2012 ರಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಮುಖ್ಯ ಕಾರ್ಯ ನಿರ್ವಾಹಕರು, ಜಿಲ್ಲಾ ಪಂಚಾಯತ್ ಇವರಿಗೆ ನಿ ಪಿ 572 ರಂತೆ ಒಂದು ದೂರನ್ನು ನೀಡಿದರು. ಸದರಿ ನಿ ಪಿ 572 ರ ಆಧಾರದ ಮೇಲೆ ನಾನು ನಿ ಪಿ 573 ರಂತೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಕೋಲಾರ ತಾಲ್ಲೂಕು ಇವರಿಗೆ ಕಾರಣ ಕೇಳಿ ನೋಟೀಸನ್ನು ದಿನಾಂಕ 18.08.2012 ರಂದು ನೀಡಿದೆ. ಆಗ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾಗಿ 1 ನೇ ಆರೋಪಿ ಇದ್ದರು. ನಿ ಪಿ 573 ರಲ್ಲಿನ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಾರೆ. 1 ನೇ ಆರೋಪಿಯು ಸದರಿ ನೋಟೀಸಿಗೆ ಈಗ ತೋರಿಸಿದ ನಿ ಪಿ 574 ರಂತೆ ಉತ್ತರಿಸಿರುತ್ತಾರೆ. ನಿ ಪಿ 574 ರಲ್ಲಿನ 1 ನೇ ಆರೋಪಿಯ ಸಹಿಯನ್ನು ಸಾಕ್ಷಿದಾರರು ಗುರ್ತಿಸಿದ್ದು ಅದನ್ನು ನಿ ಪಿ 574(ಎ) ಎಂದು ಗುರ್ತಿಸಲಾಯಿತು.

10. ದಿನಾಂಕ 17.08.2012 ರಂದು ನಿ ಪಿ 511 ರಂತೆ ನಾನು ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಕೋಲಾರ ರವರಿಗೆ ಪತ್ರ ಬರೆದು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ಇವರು ಜಿಲ್ಲಾ ಪಂಚಾಯತ್ ನಿಂದ ಅನುದಾನವಿಲ್ಲದೆ ಯೋಜನೆ ಕಾರ್ಯಕ್ರಮಗಳಲ್ಲಿ ಅನುದಾನ ಡ್ರಾ ಆಗಿರುವ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿದೆ. ಸದರಿ ಜಿಲ್ಲಾ ಖಜಾನಾಧಿಕಾರಿಗಳಿಗೆ ನಿ ಪಿ 512 ರಂತೆ ಸ್ಪಷ್ಟೀಕರಣ ಕೊಡುವಂತೆ ದಿನಾಂಕ 30.08.2012 ರಂದು ಪುನಃ ಪತ್ರ ಬರೆದೆ ಮತ್ತು ಮೂಲ ಓಚರ್ ನ ಪ್ರತಿಗಳನ್ನೂ ಸಹಾ ಅವರಿಗೆ ಕಳುಹಿಸಿಕೊಟ್ಟೆ. ಜಿಲ್ಲಾ ಖಜಾನಾಧಿಕಾರಿಗಳು ನಿ ಪಿ 513 ಮತ್ತು 514 ರಂತೆ ಸ್ಪಷ್ಟೀಕರಣ ನೀಡಿದ್ದಾರೆ.

11. ನಿ ಪಿ 575 ರಂತೆ ಜಿಲ್ಲಾ ಪಂಚಾಯತ್ ಸಿಇಒ ರವರು ಶ್ರೀಮತಿ ತಬಸ್ಸುಂ ಅಬ್ರೋ, ಖಜಾನಾ ನಿರ್ದೇಶಕ ರವರಿಗೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ರವರು ಜಿಲ್ಲಾ ಪಂಚಾಯತ್ ನಿಂದ ಅನುದಾನವಿಲ್ಲದೆ ಯೋಜನೆ ಕಾರ್ಯಕ್ರಮಗಳಲ್ಲಿ ಅನುದಾನ ಡ್ರಾ ಆಗಿರುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಪತ್ರ ಬರೆದಿದ್ದರು. ಸದರಿ ತಬಸ್ಸುಂ ರವರು ನಿ ಪಿ 576 ರಂತೆ ಅದಕ್ಕೆ ಉತ್ತರಿಸಿದ್ದಾರೆ.

12. ಜಿಲ್ಲಾ ಪಂಚಾಯತ್ ನ ಸಿಇಒ ರವರು 1 ನೇ ಆರೋಪಿಗೆ ನೀಡಿರುವ ಕಾರಣ ಕೇಳಿ ನೋಟೀಸು ನಿ ಪಿ 579 ಮತ್ತು 580 ಇವೆ. 1 ನೇ ಆರೋಪಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಜಿಲ್ಲಾ ಪಂಚಾಯತ್ ಸಿಇಒ ರವರು ಆಯುಕ್ತರಿಗೆ ಮತ್ತು ನಿರ್ದೇಶಕರಿಗೆ ಬರೆದ ಪತ್ರಗಳು ನಿ ಪಿ 581 ಮತ್ತು 582 ಇವೆ.

13. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ರವರು ಜಿಲ್ಲಾ ಪಂಚಾಯತ್ ನಿಂದ ಅನುದಾನವಿಲ್ಲದೆ ಯೋಜನೆಯ ಕಾರ್ಯಕ್ರಮಗಳಲ್ಲಿ ಅನುದಾನ ಡ್ರಾ ಮಾಡಿದ ಬಗ್ಗೆ ನಾನು ನೀಡಿದ ಟಿಪ್ಪಣಿ ನಿ ಪಿ 583 ಇದೆ. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಾರೆ.

14. 2012-13 ನೇ ಸಾಲಿನ ಇಲಾಖಾ ವೆಚ್ಚಗಳ ಮೇಲೆ ನಿಯಂತ್ರಣ ಕುರಿತು ಹಾಗೂ ಲೆಕ್ಕ ಸಮನ್ವಯ ಮಾಡುವ ಕುರಿತು ಸಿಇಒ ರವರು ಹೊರಡಿಸಿರುವ ಸುತ್ತೋಲೆ ಮತ್ತು ಅಧಿಕೃತ ಜ್ಞಾಪನ ಪತ್ರ ನಿ ಪಿ 584 ಮತ್ತು 585 ಇವೆ. ತನಿಖಾಧಿಕಾರಿ ನನ್ನ ಹೇಳಿಕೆ ಪಡೆದಿದ್ದಾರೆ.

<u>ಪಾಟೀ ಸವಾಲುಃ</u> ನ್ಯಾಯಾಲಯದ ಬೆಳಗಿನ ಸಮಯವಾದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ

ಮಧ್ಯಾಹ್ನ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>

15. ನಿ ಪಿ 586 ಮಹಜರನ್ನು ನಮ್ಮ ಕಛೇರಿಯಲ್ಲಿ ಮಧ್ಯಾಹ್ನ 1.15 ರಿಂದ 3.45 ರವರೆಗೆ ಮಾಡಲಾಗಿದೆ. ಸದರಿ ಮಹಜರು ಮಾಡುವ ಮೊದಲು ದಾಖಲೆಗಳನ್ನು ಒದಗಿಸುವಂತೆ ತನಿಖಾಧಿಕಾರಿಯವರು ನೋಟೀಸನ್ನು ನೀಡಿದ್ದಾರಾ ಎಂದರೆ ಸಾಕ್ಷಿದಾರರು ದಿನಾಂಕ 27.11.2012 ರಂದು ನೀಡಿದ್ದಾರೆ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಸದರಿ ನೋಟೀಸಿನಲ್ಲಿ ತನಿಖಾಧಿಕಾರಿಯವರು ತಿಳಿಸಿದ್ದರು. ನೀವು ನೀಡಿದ ದಾಖಲೆಗಳು ಯಾರ ಕಸ್ಟಡಿಯಲ್ಲಿ ಇದ್ದವು ಎಂದರೆ ಸಾಕ್ಷಿದಾರರು ಬಿಲ್ಲುಗಳನ್ನು ಖಜಾನೆಗೆ ಪತ್ರ ವ್ಯವಹಾರ ಮಾಡಿ ತರೆಸಿಕೊಳ್ಳಲಾಗಿತ್ತು ಮತ್ತು ಜ್ಞಾಪನಗಳು, ನೋಟೀಸುಗಳು, ಪತ್ರ ವ್ಯವಹಾರಗಳು ಇವು ನಮ್ಮ ಕಛೇರಿಯಲ್ಲೇ ಇದ್ದವು, ಅವು ಎಲ್ಲಾ ಕೇಸ್ ವರ್ಕರ್ ಹತ್ತಿರ ಇದ್ದವು, ಅವುಗಳನ್ನೇ ತನಿಖಾಧಿಕಾರಿಗೆ ನೀಡಿದ್ದೇನೆ ಎನ್ನುತ್ತಾರೆ. ಬಿಲ್ಲುಗಳನ್ನು ಟ್ರೆಜರಿಗೆ ನೋಟೀಸು ಕೊಟ್ಟು ತರೆಸಿಕೊಂಡಿದ್ದೀರಾ ಎಂದರೆ ಸಾಕ್ಷಿದಾರರು ಖಜಾನೆಯಲ್ಲಿ ಬಿಲ್ಲು ಪಾಸ್ ಆದ ನಂತರದ ತಿಂಗಳಿನಲ್ಲಿ 62-ಬಿ ಮತ್ತು ಓಚರ್ ಗಳು ನಮ್ಮ ಕಛೇರಿಗೆ ಆಟೋಮೆಟಿಕ್ ಆಗಿ ಬರುತ್ತವೆ ಎನ್ನುತ್ತಾರೆ.

16. ಟ್ರೆಜರಿಯಿಂದ ಆ ರೀತಿ 62-ಬಿ ಮತ್ತು ಓಚರ್ ಗಳು ಬಂದ ಮೇಲೆ ಕೇಸ್ ವರ್ಕರ್ ಅದನ್ನು ಪರಿಶೀಲನೆ ಮಾಡುತ್ತಾರೋ ಅಥವಾ ಇಲ್ಲವೋ ಎಂದರೆ ಸಾಕ್ಷಿದಾರರು ಕೇಸ್ ವರ್ಕರ್ ಪರಿಶೀಲನೆ ಮಾಡುತ್ತಾರೆ, ಈ ಪ್ರಕರಣದ ಬಗ್ಗೆ ದೂರು ಬಂದ ನಂತರ ಲೆಕ್ಕ ಸಮನ್ವಯ ಮಾಡಲಾಗಿದೆ ಎನ್ನುತ್ತಾರೆ. ಆಗ ಕೇಸ್ ವರ್ಕರ್ ಯಾರಿದ್ದರು ಎಂದರೆ ಸಾಕ್ಷಿದಾರರು ಚಂದನ್ ಎಂಬುವವರಿದ್ದರು ಎನ್ನುತ್ತಾರೆ.

17. ದೂರು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಂದ ಬಂದಿದೆ. ಆ ರೀತಿ ದೂರು ಬಂದ ಮೇಲೆ ಮುಖ್ಯ ಕಾರ್ಯ ನಿರ್ವಾಹಕರು ನನಗೆ ನಿರ್ದೇಶನವನ್ನು ಸದರಿ ದೂರು ನಿ ಪಿ 572 ರಲ್ಲಿಯೇ ನೀಡಿದ್ದಾರೆ. ನಾನು ದಾಖಲಾತಿಗಳನ್ನು ಪರಿಶೀಲಿಸಿದೆ. ಆ ರೀತಿ ದಾಖಲೆಗಳನ್ನು ಪರಿಶೀಲಿಸಿ ನಿ ಪಿ 583 ರಂತೆ ವರದಿ ನೀಡಿದ್ದೇನೆ. ಆ ರೀತಿ ವರದಿ ನೀಡುವಾಗ ನಿ ಪಿ 586 ಮಹಜರಿನಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿದಾರರು ತನಿಖಾ ತಂಡದ ವರದಿಯ ಮೇಲೆ ನಾನು ನನ್ನ ಟಿಪ್ಪಣಿಯನ್ನು ಸಿದ್ಧಪಡಿಸಿ ನೀಡಿದ್ದೇನೆ. ಮಹಜರು

ಸಮಯದಲ್ಲಿ ಅಮಾನತ್ತು ಪಡಿಸಿಕೊಂಡ ಎಲ್ಲಾ ದಾಖಲೆಗಳಿಗೆ ನನ್ನ ಜೊತೆಗೆ ನಾಗರತ್ನಮ್ಮ ಮತ್ತು ಮೋಹನ್ ಬಾಬು ರವರು ಸಹಿ ಮಾಡಿದ್ದಾರೆ. ದಾಖಲೆಗಳು ಯಾರ ಕಸ್ಟಡಿಯಲ್ಲಿದ್ದವು ಆ ವ್ಯಕ್ತಿಯ ಸಹಿಯನ್ನು ಆ ದಾಖಲೆಗಳಿಗೆ ಪಡೆದಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ.

18. ನೀವು ತನಿಖಾಧಿಕಾರಿಯೊಂದಿಗೆ ಮತ್ತು ತನಿಖಾಧಿಕಾರಿ ನಿಮ್ಮೊಂದಿಗೆ ಮಾಡಿದ ಪತ್ರಗಳಿಗೆ, 1 ನೇ ಆರೋಪಿಗೆ ನೀಡಿದ ಕಾರಣ ಕೇಳಿ ನೋಟೀಸು ಮತ್ತು ಅವರು ನೀಡಿದ ಉತ್ತರ ಈ ಎಲ್ಲಾ ದಾಖಲೆಗಳಿಗೆ ನಿಮ್ಮನ್ನು ಬಿಟ್ಟು ಬೇರೆ ಯಾರಾದರೂ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿದಾರರು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಸಹಾ ಕಾರಣ ಕೇಳಿ ನೋಟೀಸನ್ನು ನೀಡಿದ್ದಾರೆ ಎನ್ನುತ್ತಾರೆ.

19. ನಿ ಪಿ 573, 574, 511 ಈ ದಾಖಲೆಗಳನ್ನು ಸಾಕ್ಷಿದಾರರಿಗೆ ತೋರಿಸಿ ಅವುಗಳಲ್ಲಿ ಕ್ರಮ ಸಂಖ್ಯೆ 1 ಮತ್ತು 2 ಎಂಬ ಕಡೆ ಇರುವ ಸಹಿ ಯಾರದ್ದು ಎಂದರೆ ಸಾಕ್ಷಿದಾರರು ಅವು ಪಂಚಸಾಕ್ಷಿದಾರರ ಸಹಿಗಳು ಎನ್ನುತ್ತಾರೆ. ಅವುಗಳನ್ನು ಯಾವಾಗ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂದರೆ ಸಾಕ್ಷಿದಾರರು ದಿನಾಂಕ 05.12.2012 ಎನ್ನುತ್ತಾರೆ.

20. ದಾಖಲೆಗಳನ್ನು ನನ್ನಿಂದ ಸ್ವೀಕರಿಸಿದ್ದಕ್ಕೆ ತನಿಖಾಧಿಕಾರಿಯವರು ನನಗೆ ಸ್ವೀಕೃತಿ ಪತ್ರವನ್ನು ನೀಡಿಲ್ಲ. ದಿನಾಂಕ 05.12.2012 ಕ್ಕೂ ಮೊದಲು ನಿ ಪಿ 586 ಮಹಜರಿನಲ್ಲಿ ಅಮಾನತ್ತಾದ ಎಲ್ಲಾ ದಾಖಲೆಗಳನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎನ್ನುತ್ತಾರೆ. ದಿನಾಂಕ 05.12.2012 ರಂದು ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಯಾವುದೇ ದಾಖಲೆಗಳನ್ನು ತನಿಖಾಧಿಕಾರಿಗೆ ನೀಡಿಲ್ಲ ಮತ್ತು ತನಿಖಾಧಿಕಾರಿಯವರು ಆ ರೀತಿ ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತರ ಮಾತುಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ

21. ನಾಗರತ್ನಮ್ಮ ಎಂಬುವವರ್ಯಾರೂ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 5 ನೇ ಆರೋಪಿ ಪರ ಶ್ರೀ ಎವಿಎ ವಕೀಲರಿಂದಃ

22. ನಿ ಪಿ 558 ರಂತೆ ತನಿಖಾಧಿಕಾರಿಯವರು ಮಾಹಿತಿ ಮತ್ತು ವರದಿಯನ್ನು ನಿಮಗೆ ಕೇಳಿದ್ದಾರೆ ಎಂದರೆ ಸರಿ. ನಿ ಪಿ 558 ರಲ್ಲಿ ಪ್ರಶ್ನೆ ಮಾಲಿಕೆಯಲ್ಲಿ ಮಾಹಿತಿಯನ್ನು ಕೇಳಿದ್ದಾರೆ ಎಂದರೆ ಸರಿ. ಪ್ರತಿಯೊಂದು ಪ್ರಶ್ನೆಗೆ ಉತ್ತರದ ರೀತಿಯಲ್ಲಿ ಮಾಹಿತಿಯನ್ನು ನೀಡಿಲ್ಲ.

23. ದಾಖಲಾತಿಗಳು ಕೇಸ್ ವರ್ಕರ್ ನ ಕಸ್ಟಡಿಯಲ್ಲಿ ಇದ್ದವು ಎಂದು ಹೇಳಿದ್ದೀರಿ, ಆದ್ದರಿಂದ ಆಕೆಗೆ ನೋಟೀಸು ಕೊಟ್ಟು ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿದಾರರು ಆಕೆಗೆ ನೋಟೀಸು ಕೊಟ್ಟಿಲ್ಲ, ಬಾಯಿ ಮಾತಿನಿಂದ ಕೇಳಿ ಪಡೆದಿದ್ದೇನೆ ಮತ್ತು ಕೇಸ್ ವರ್ಕರ್ ನನ್ನ ಅಧೀನದ ಸಿಬ್ಬಂದಿ ಎನ್ನುತ್ತಾರೆ.

24. ನಿ ಪಿ 568 ನ್ನು ಉಲ್ಲೇಖಿಸಿ ಏಪ್ರಿಲ್ ನಿಂದ ಜೂನ್ ಮಾಹೆಗೆ ಎಂದರೆ ಏನು ಎಂದರೆ ಸಾಕ್ಷಿದಾರರು ಆ ಅವಧಿಗೆ ಹಣ ಬಿಡುಗಡೆಗೆ ಅಧಿಕೃತ ಜ್ಞಾಪನಾ ಪತ್ರ ಎನ್ನುತ್ತಾರೆ. ಆ ಪತ್ರವನ್ನು ಏಪ್ರಿಲ್ ತಿಂಗಳಿನಲ್ಲೇ ಕೊಡಲಾಗಿದೆ. ಆ ಅವಧಿಯ ಪ್ರಾರಂಭಿಕ ತಿಂಗಳಿನಲ್ಲಿಯೇ ಅಧಿಕೃತ ಜ್ಞಾಪನಾ ನೀಡಬೇಕು. ನಿ ಪಿ 569 ನ್ನು ಉಲ್ಲೇಖಿಸಿ ಅದು ಏಪ್ರಿಲ್ ನಿಂದ ಜುಲೈ ತಿಂಗಳಿನವರೆಗೆ ಇದೆ ಎಂದರೆ ಸರಿ. ನಿ ಪಿ 569 ನ್ನು ಸಹಾ ಏಪ್ರಿಲ್ ನಲ್ಲಿಯೇ ನೀಡಬೇಕಾಗಿತ್ತು ಎಂದರೆ ಸಾಕ್ಷಿದಾರರು ನಿ ಪಿ 568 ವೇತನಕ್ಕೆ ಸಂಬಂಧಿಸಿದ ಅನುದಾನದ ಆದೇಶ ಇದೆ, ನಿ ಪಿ 569 ಇದು ವೇತನೇತರ ಅನುದಾನವನ್ನು ಸಹಾ ಒಳಗೊಂಡಿದ್ದು ಅದಕ್ಕೆ ಆರ್ಥಿಕ ಇಲಾಖೆಯಿಂದ ಜೂನ್ 2012 ರಲ್ಲಿ ಹಣ ಬಿಡುಗಡೆಯಾಗಿದೆ, ಆದ್ದರಿಂದ ನಿ ಪಿ 569 ನ್ನು ಜುಲೈ ನಲ್ಲಿ ನೀಡಲಾಗಿದೆ ಎನ್ನುತ್ತಾರೆ. ಜೂನ್ ನಲ್ಲಿ ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಾ, ಏಪ್ರಿಲ್ ನಲ್ಲೇ ಆಗಿತ್ತು ಎಂದರೆ ಸಾಕ್ಷಿದಾರರು ನಾನು 01.06.2012 ರಿಂದ ಮುಖ್ಯ ಲೆಕ್ಕಾಧಿಕಾರಿಯಾಗಿ ಇದ್ದೆ ಮತ್ತು ನನ್ನ ಮುಂದೆ ಸದರಿ ಅಧಿಕೃತ ಜ್ಞಾಪನವನ್ನು ತಂದಾಗ ಅದರಲ್ಲಿ ದಿನಾಂಕ 20.04.2012 ಎಂದು ಇತ್ತು, ಆದ್ದರಿಂದ ಅದನ್ನು ರೌಂಡ್ ಮಾಡಿ ನಾನು ಸಹಿ ಮಾಡಿದ ದಿನಾಂಕ 25.07.2012 ನ್ನು ಅದರಲ್ಲಿ ನಮೂದಿಸಿದ್ದೇನೆ ಎನ್ನುತ್ತಾರೆ.

25. ನಿ ಪಿ 514 ನ್ನು ಉಲ್ಲೇಖಿಸಿ ಅದರಲ್ಲಿ 'ಆದರೆ ಉಲ್ಲೇಖ V ರಲ್ಲಿ ನಮೂದಿಸಿರುವ ತಮ್ಮ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಪತ್ರದ ಮೇಲೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಸಹಾ ದೃಢೀಕರಿಸಿರುತ್ತಾರೆ' ಎಂದು ಇದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಸದರಿ ವಿವರಣೆಯನ್ನು ನಾನು ಒಪ್ಪಿಲ್ಲ ಎನ್ನುತ್ತಾರೆ. ಆ ವಿವರಣೆಗೆ ಸಂಬಂಧಿಸಿದಂತೆ ಅನುದಾನ

ಬಿಡುಗಡೆಯಾಗಿರುವ ಬಗ್ಗೆಯಾಗಲೀ, ಸಮಾಜ ಕಲ್ಯಾಣಾಧಿಕಾರಿಗಳು ದೃಢೀಕರಿಸಿರುವ ಬಗ್ಗೆಯಾಗಲೀ ನೀವು ಪ್ರತ್ಯೇಕವಾಗಿ ಮತ್ತೆ ಪರಿಶೀಲಿಸಿಲ್ಲ ಎಂದರೆ ಸರಿ.

26. ಫ್ಲಾಪಿಯಲ್ಲಿರುವ ಮಾಹಿತಿಯನ್ನೇ ಪ್ರಿಂಟ್ ತೆಗೆದು ಜಿಲ್ಲಾ ಖಜಾನೆಗೆ ಕಳುಹಿಸುತ್ತೇವೆ ಎಂದರೆ ಸರಿ. ಆ ರೀತಿ ಪ್ರಿಂಟ್ ತೆಗೆದ ಮಾಹಿತಿಗೆ ಮತ್ತು ಫ್ಲಾಪಿಯಲ್ಲಿನ ಮಾಹಿತಿಗೆ ಹೊಂದಾಣಿಕೆಯಾಗದೇ ಇದ್ದರೆ ಅಥವಾ ಫ್ಲಾಪಿ ಓಪನ್ ಆಗದೇ ಇದ್ದರೆ ಜಿಲ್ಲಾ ಖಜಾನೆಯವರು ಹಿಂಬರಹದೊಂದಿಗೆ ಬಿಲ್ಲನ್ನು ವಾಪಸ್ಸು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನಾವು ಕರೆಕ್ಷನ್ ಮಾಡಿ ವಾಪಸ್ಸು ಕಳುಹಿಸಿಕೊಡುತ್ತೇವೆ ಎನ್ನುತ್ತಾರೆ.

27. ನಿ ಪಿ 91(ಎ) ಇದು ನಿಮ್ಮ ಕಛೇರಿಯಿಂದ ಖಜಾನೆಗೆ ಹೋಗಿದೆ ಎಂದರೆ ಸಾಕ್ಷಿದಾರರು ಮೊದಲು ಸರಿ ಎಂದು, ನಂತರ ನಾವು ಕಳುಹಿಸಿದ ಫ್ಲಾಪಿ ಪ್ರಿಂಟ್ ಗೆ ಜಿಲ್ಲಾ ಪಂಚಾಯತ್ ನ ಮುಖ್ಯ ಲೆಕ್ಕಾಧಿಕಾರಿಯ ಸಹಿ ಇರುತ್ತದೆ, ನಿ ಪಿ 91(ಎ) ಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಸೀಲು ಮತ್ತು ಸಹಿ ಇದೆ, ಆದ್ದರಿಂದ ಅದನ್ನು ನಮ್ಮ ಕಛೇರಿಯಿಂದ ಕಳುಹಿಸಿಲ್ಲ ಎನ್ನುತ್ತಾರೆ ಮತ್ತು ನಿ ಪಿ 525 ನ್ನು ಉಲ್ಲೇಖಿಸಿ ಅದರಲ್ಲಿ ತಿಳಿಸಿರುವಂತೆ ನಮ್ಮ ಕಛೇರಿಯ ಸಹಿ ಮತ್ತು ಸೀಲು ಇರುತ್ತದೆ ಎನ್ನುತ್ತಾರೆ. ನಿ ಪಿ 91(ಎ) ರಲ್ಲಿ ನಮೂದಿಸಿದ ದಿನಾಂಕ 12.07.2012 ಈ ತಾರೀಖಿಗೆ ಸಂಬಂಧಿಸಿದ ನಿಮ್ಮ ಕಛೇರಿಯ ಫ್ಲಾಪಿ ಪ್ರಿಂಟ್ ಎಲ್ಲಿದೆ ಎಂದರೆ ಸಾಕ್ಷಿದಾರರು ಆ ತಾರೀಖಿನ ನಮ್ಮ ಕಛೇರಿಯ ಫ್ಲಾಪಿ ಪ್ರಿಂಟ್ ಇಲ್ಲ ಎನ್ನುತ್ತಾರೆ. ದಿನಾಂಕ 12.07.2012 ಕ್ಕೆ ನಿಮ್ಮ ಕಛೇರಿಯಿಂದ ಟ್ರೆಜರಿಗೆ ಅನುದಾನ ಹಂಚಿಕೆಯ ಹಣ ಹೋಗಿದ್ದಕ್ಕೆ ಫ್ಲಾಪಿ ಪ್ರಿಂಟ್ ಇದೆಯಾ ಎಂದರೆ ಸಾಕ್ಷಿದಾರರು ಇಲ್ಲ ಎನ್ನುತ್ತಾರೆ.

28. ನಿ ಪಿ 90 ನ್ನು ಸಾಕ್ಷಿದಾರರಿಗೆ ತೋರಿಸಿ ಸದರಿ ಅನುದಾನದ ಹಣ ಬಿಡುಗಡೆ ಪತ್ರ ದಿನಾಂಕ 12.04.2012 ರಂದು ನಿಮ್ಮ ಕಛೇರಿಯಿಂದ ಆದೇಶ ಆಗಿದೆ ಎಂದರೆ ಸಾಕ್ಷಿದಾರರು ಆ ದಾಖಲೆ ನನ್ನ ಹತ್ತಿರ ಲಭ್ಯವಿಲ್ಲ, ಆದ್ದರಿಂದ ನನಗೆ ಉತ್ತರಿಸಲು ಆಗುವುದಿಲ್ಲ ಎನ್ನುತ್ತಾರೆ. ಅದರಲ್ಲಿರುವ ಸಹಿ ನಿಮ್ಮ ಹಿಂದಿನ ಮುಖ್ಯ ಲೆಕ್ಕಾಧಿಕಾರಿಯವರದ್ದು ಎಂದರೆ ಸರಿ.

29. ನಿ ಪಿ 586 ಮಹಜರಿನಲ್ಲಿ ಅಮಾನತ್ತು ಪಡಿಸಿಕೊಂಡ ದಾಖಲೆಗಳ ಒಂದು ಪ್ರತಿಯನ್ನು ನಾನು ವೈಯಕ್ತಿಕವಾಗಿ ಮಾಡಿಸಿ ಇಟ್ಟುಕೊಂಡಿಲ್ಲ. ದಿನಾಂಕ 04.01.2013 ರಂದು ಲೋಕಾಯುಕ್ತ ಠಾಣೆಗೆ ಹೇಳಿಕೆ ನೀಡಲು ಹೋಗಿದ್ದೆ, ಆ ದಿನ ನಮ್ಮ ಕಛೇರಿಯಿಂದ ಯಾವುದೇ ದಾಖಲೆಗಳನ್ನು ತೆಗೆದುಕೊಂಡು ಹೋಗಿಲ್ಲ. ಆ ದಿನ ನಾನು ಯಾವುದೇ ದಾಖಲೆಗಳನ್ನು

ಪರಿಶೀಲಿಸಿ ಹೇಳಿಕೆ ನೀಡಿಲ್ಲ, ಹಾಗೆಯೇ ಹೇಳಿಕೆ ನೀಡಿದ್ದೇನೆ. ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 6 ಮತ್ತು 7 ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ